1	2	3	4	5
26	Hassan	4	246.55	945.00
27	Dakshina Kannada	2	533.48	100.00
28	Udupi	5	392.97	270.00
29	Kodagu	44	2,099.50	970.00
	GRAND TOTAL	**624**	**93,825.70**	**35,000.00**

ಕೌಶಲ್ಯ ತರಬೇತಿ

310 (729) ಶ್ರೀ ಈಶ್ವರ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಾ: ನಂಜುಂಡಪ್ಪ ವರದಿಯ ಶಿಫಾರಸ್ಸಿನನ್ವಯ ಅತೀ ಹಿಂದುಳಿದ ಪ್ರದೇಶಗಳಲ್ಲಿ ಕೌಶಲ್ಯ ಸಿರಿ ಕೇಂದ್ರಗಳ ಮೂಲಕ ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ ಎಷ್ಟು ಜನ ಅಭ್ಯರ್ಥಿಗಳಿಗೆ ಕೌಶಲ್ಯ ತರಬೇತಿ ನೀಡಲಾಗಿದೆ; ಇದಕ್ಕಾಗಿ ವೆಚ್ಚ ಮಾಡಿರುವ ಹಣವೆಷ್ಟು; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಆ) ಬೀದರ್ ಜಿಲ್ಲೆಯ ವಿವಿಧ ಮತ ಕ್ಷೇತ್ರಗಳ ಎಷ್ಟು ಜನ ಅಭ್ಯರ್ಥಿಗಳು ಯಾವ ಯಾವ ವೃತ್ತಿಗಳಲ್ಲಿ ತರಬೇತಿ ಪಡೆಯುವ ಮೂಲಕ ಈ ಯೋಜನೆಯ ಲಾಭವನ್ನು ಪಡೆದುಕೊಂಡಿದ್ದಾರೆ?

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):

ಅ) ಅತೀ ಹಿಂದುಳಿದ ಪ್ರದೇಶಗಳ 20539 ಅಭ್ಯರ್ಥಿಗಳಿಗೆ ಕೌಶಲ್ಯ ಸಿರಿ ಕೇಂದ್ರಗಳ ಮೂಲಕ ಕಳೆದ ಒಂದು ವರ್ಷದಿಂದ ಇಲ್ಲಿಯವರೆಗೆ ಕೌಶಲ್ಯ ತರಬೇತಿ ನೀಡಲಾಗಿದೆ. ಇದಕ್ಕಾಗಿ ವೆಚ್ಚ ಮಾಡಿರುವ ಹಣ ₹7,18,86,500/– (ಜಿಲ್ಲಾವಾರು ಅಂಕಿ ಅಂಶಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಆ) ಬೀದರ್ ಜಿಲ್ಲೆಯ ವಿವಿಧ ಮತ ಕ್ಷೇತ್ರಗಳ 2393 ಅಭ್ಯರ್ಥಿಗಳು ಉಡುಪು ತಯಾರಿಕೆ ಇಲೆಕ್ಟ್ರಿಕಲ್, ರೀಟೈಲ್ ಹಾಸ್ಪಿಟಾಲಿಟಿ, ಕಟ್ಟಡ ನಿರ್ಮಾಣ, ಜೀವನ ಕಲೆ, ವೃತ್ತಿಗಳಲ್ಲಿ ತರಬೇತಿ ಪಡೆಯುವ ಮೂಲಕ ಈ ಯೋಜನೆಯ ಲಾಭವನ್ನು ಪಡೆದುಕೊಂಡಿದ್ದಾರೆ.

ಅನುಬಂಧ–1

ಕೌಶಲ್ಯ ಸಿರಿ ಮುಖಾಂತರ ಹಿಂದುಳಿದ ಮತ್ತು ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ತರಬೇತಿ ನೀಡಿರುವ ವಿವರ ಹಾಗೂ ತರಬೇತಿ ನೀಡಲು ವೆಚ್ಚ ಮಾಡಿರುವ ಜಿಲ್ಲಾವಾರು ವಿವರ

Skill Development Programme through Koushalya Siri Centres from April, 2010 to February, 2011

EXPENDITURE DETAILS

Sl. No.	ಜಿಲ್ಲೆಗಳು	No. of Candidates	ಒಟ್ಟು
1	2	3	4
1	ಬಳ್ಳಾರಿ	1224	4284000
2	ಬೀದರ್	2371	8298500
3	ಗುಲ್ಬರ್ಗಾ	3536	12376000
4	ಬಾಗಲಕೋಟೆ	186	651000
5	ಬೆಳಗಾವಿ	1367	4784500
6	ಬಿಜಾಪುರ	457	1599500
7	ಬೆಂಗಳೂರು (ಗ್ರಾ)	250	875000
8	ಚಿತ್ರದುರ್ಗ	1115	3902500
9	ತುಮಕೂರು	970	3395000
10	ಚಾಮರಾಜನಗರ	800	2800000
11	ಕೊಪ್ಪಳ	560	1960000
12	ರಾಯಚೂರು	680	238000
13	ದಾವಣಗೆರೆ	151	528500
14	ಕೋಲಾರ	586	2051000

1	2	3	4
15	ಮೈಸೂರು	3862	13517000
16	ಧಾರವಾಡ	664	2324000
17	ಶಿವಮೊಗ್ಗ	660	2310000
18	ಚಿಕ್ಕಮಗಳೂರು	60	210000
19	ಮಂಡ್ಯ	920	3220000
20	ಯಾದಗೀರ್	120	420000
		20539	**71886500**

ನಾಲೆಯ ಮೇಲ್ಗಾಲುವೆ ಒಡೆದು ಹೋಗಿರುವುದು

311 (72) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು): ಮಾನ್ಯ ಜನಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಸೂಳೆಕೆರೆ ದಕ್ಷಿಣ ನಾಲೆಯ ಮೇಲ್ಗಾಲುವೆ ಇತ್ತೀಚೆಗೆ ಒಡೆದುಹೋಗಿದ್ದು, ಇದರಿಂದ ಸಾವಿರಾರು ರೈತರ ಬೆಳೆಗಳಿಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಮೇಲ್ಗಾಲುವೆಯನ್ನು ಹೊಸದಾಗಿ ನಿರ್ಮಾಣ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಇ) ಹಾಗಿದ್ದಲ್ಲಿ ಈ ಮೇಲ್ಗಾಲುವೆ ನಿರ್ಮಾಣಕ್ಕಾಗಿ ಅನುದಾನವನ್ನು ನಿಗದಿಪಡಿಸಿ ಬಿಡುಗಡೆ ಮಾಡಲಾಗಿದೆಯೇ;

ಈ) ಮಾಡಿದ್ದಲ್ಲಿ, ಹೊಸದಾಗಿ ಮೇಲ್ಗಾಲುವೆ ಕಾಮಗಾರಿಯನ್ನು ಯಾವಾಗ ಕೈಗೆತ್ತಿಕೊಳ್ಳಲಾಗುವುದು; (ಮಾಹಿತಿ ನೀಡುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು):

ಅ) ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಸೂಳೆಕೆರೆ ದಕ್ಷಿಣ ನಾಲೆಯ ಮೇಲ್ಗಾಲುವೆ ಗೋಡೆಗಳು ದಿನಾಂಕ: 07.01.2001ರಂದು ಒಡೆದಿರುತ್ತದೆ. ಇದರಿಂದ ಬೆಳೆಗಳಿಗೆ ಯಾವುದೇ ಹಾನಿಯಾಗಿರುವುದಿಲ್ಲ. ಒಡೆದು ಹೋಗಿದ್ದ ಮೇಲ್ಗಾಲುವೆಯ ಗೋಡೆಗಳನ್ನು ದುರಸ್ಥಿಗೊಳಿಸುವ ಕಾಮಗಾರಿಯನ್ನು ದಿನಾಂಕ: 31.01.2011ರಂದು ಪೂರ್ಣಗೊಳಿಸಲಾಗಿರುತ್ತದೆ.